# 'ಗ್ರಾಮ ಸ್ವರಾಜ್ ಚಿಂತನ-ಮಂಥನ'

ವರದಿ



ಕೃಪಾ ಎಂ.ಎಂ.

ಗ್ರಾಮ ಪಂಚಾಯತಿ ಹಕ್ಕೊತ್ತಾಯ ಆಂದೋಲನದ ಕಾರ್ಯಕರ್ತರು
ಹಾಗೂ
ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ಸಂಯೋಜಕರು
ಮೊ: 99453 75430

ದೇಶದಾದ್ಯಂತ ತ್ರಿಸ್ತರ ಪಂಚಾಯತಿ ರಾಜ್ ವ್ಯವಸ್ಥೆಗೆ ಸುಭದ್ರ ತಳಪಾಯವನ್ನು ಹಾಕಿಕೊಟ್ಟ ನಮ್ಮ ದೇಶದ 73ನೇ ಸಾಂವಿಧಾನಿಕ ತಿದ್ದುಪಡಿಗೆ ಈಗ ರಜತೋತ್ಸವದ ಸಂಭ್ರಮ. ಗ್ರಾಮ ಸಭೆಯ ಪಾರಮ್ಯವನ್ನು ಎತ್ತಿ ಹಿಡಿದ ಈ 73ನೇ ಸಂವಿಧಾನ ತಿದ್ದುಪಡಿಯ 25ರ ಕಾಲಘಟ್ಟದಲ್ಲಿ, ಅದರ ಆಶಯಗಳು, ಒಳ-ಹೊರಗುಗಳು, ಈ ತಿದ್ದುಪಡಿಯನ್ನು ಇನ್ನೂ ಸಬಲಗೊಳಿಸಲು ಪೂರಕವಾದ ಅಂಶಗಳು, ಇದರ ಆಶಯದ ತಳಹದಿಯ ಮೇಲೆ ರೂಪಿಸಲಾದ ಹಲವಾರು ಕ್ರಾಂತಿಕಾರಿ ಬದಲಾವಣೆಗಳನ್ನು ಒಳಗೊಂಡ 'ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆ'ಯ ಪ್ರಮುಖ ಅಂಶಗಳು, ಕಾನೂನಾತ್ಮಕವಾಗಿ ರಾಜ್ಯದ ಗ್ರಾಮ ಸಭೆಯ ಹಕ್ಕುಗಳು ಮತ್ತು ಅಧಿಕಾರಗಳು, ಗ್ರಾಮ ಸಭೆಗೆ ಅತ್ಯಂತ ಸಮೀಪದ ಸರ್ಕಾರವಾದ ಗ್ರಾಮ ಪಂಚಾಯತಿಯ ಅಧಿಕಾರಗಳು ಮತ್ತು ಜವಾಬ್ದಾರಿಗಳು, ಅದರ ಪರಿಣಾಮಕಾರಿ ಅನುಷ್ಠಾನದ ಪ್ರಕ್ರಿಯೆಗೆ ಇರುವ ಸವಾಲುಗಳು, ಗ್ರಾಮೀಣಾಭಿವೃದ್ಧಿಯಲ್ಲಿ ತ್ರಿಸ್ತರ ಪಂಚಾಯತಿ ವ್ಯವಸ್ಥೆಯ ಎಲ್ಲಾ ಸ್ತರಗಳ ಪಾತ್ರ ಹಾಗೂ ವ್ಯಾಪ್ತಿ ಇವೆಲ್ಲವುಗಳ ಕುರಿತಾಗಿ ಗಂಭೀರ ಚರ್ಚೆ ನಡೆಸುವುದು ಅತ್ಯಂತ ಸಮಯೋಚಿತವಾದುದು ಹಾಗೂ ಅರ್ಥಪೂರ್ಣವಾದುದು ಎಂಬ ಹಿನ್ನೆಲೆಯಲ್ಲಿ ಕುಂದಾಪುರ ತಾಲ್ಲೂಕು ಪಂಚಾಯತಿ ರಾಜ್ ಒಕ್ಕೂಟ, ಗ್ರಾಮ ಪಂಚಾಯತಿ ಹಕ್ಕೊತ್ತಾಯ ಆಂದೋಲನ, ಉಡುಪಿ ಜಿಲ್ಲಾಡಳಿತ, ಉಡುಪಿ ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆಯ ಮೂರು ತಾಲ್ಲೂಕು ಪಂಚಾಯತಿಗಳು ಹಾಗೂ ಸಮಾನ ಮನಸ್ಕ ಸಂಸ್ಥೆಗಳ ಸಹಯೋಗದಲ್ಲಿ ಕಳೆದ ಫೆಬ್ರವರಿ **23 ಹಾಗೂ 24, 2018ರಂದು ಉಡುಪಿ ಜಿಲ್ಲೆಯ ರಜತಾದ್ರಿ, ಮಣಿಪಾಲದಲ್ಲಿ 'ಗ್ರಾಮ ಸ್ವರಾಜ್ ಚಿಂತನ-ಮಂಥನ'** ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗ್ರಾಮ ಸ್ವರಾಜ್ಯ ಸ್ಥಾಪಿಸುವಲ್ಲಿ ತ್ರಿಸ್ತರ ಪಂಚಾಯತಿ ವ್ಯವಸ್ಥೆಯು ತನ್ನ ಜವಾಬ್ದಾರಿ, ಅಧಿಕಾರಗಳನ್ನು ಅರಿತುಕೊಂಡು ಸ್ವಯಂ ಸರ್ಕಾರವಾಗಿ ಕಾರ್ಯನಿರ್ವಹಿಸುವಲ್ಲಿ ತನ್ನ ಹಕ್ಕೊತ್ತಾಯಗಳನ್ನು ಮಂಡಿಸಿ, ಕಾರ್ಯತಂತ್ರ ರೂಪಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತಿ ರಾಜ್ ಕಾಯಿದೆ & ಪರಿಣಾಮಕಾರಿ ಅನುಷ್ಠಾನ; ಸ್ಥಳೀಯಾಡಳಿತ ಕ್ಷೇತ್ರದಲ್ಲಿ ಕೇರಳದ ಅನುಭವಗಳು ಮತ್ತು ಕಲಿಕೆಗಳು; ರಾಜ್ಯದಲ್ಲಿ ಜವಾಬ್ದಾರಿಗಳ ವರ್ಗಾವಣೆ/ಹಂಚಿಕೆ - ಸಂವಿಧಾನ ತಿದ್ದುಪಡಿಪೂರ್ವ ಮತ್ತು ಗ್ರಾಮ ಸ್ವರಾಜ್ ಕಾಯ್ದೆಯ ನಂತರ; ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತಿ ರಾಜ್ ವ್ಯವಸ್ಥೆಯ ಸವಾಲುಗಳು. ಈ ಎಲ್ಲ ಚರ್ಚೆಗಳಿಂದ ಕಂಡುಕೊಂಡ ಪ್ರಮುಖ ಅಂಶವೆಂದರೆ, ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಕಾನೂನು ಬದ್ಧವಾಗಿ

**ಸಮುದಾಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಹಂತಗಳಲ್ಲಿ ಬೇರೆ ಬೇರೆ ಕಾರ್ಯಕ್ರಗಳು ತಯಾರಾಗುತ್ತವೆ. ಈ ಕಾರ್ಯಕ್ರಮಗಳನ್ನು ಗಮನದಲ್ಲಿರಿಸಿ ಯೋಜನೆ ತಯಾರಿಸುವುದು, ತಯಾರಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ಅತ್ಯಂತ ಮಹತ್ವದ್ದು.**



ಸ್ವಯಂ-ಸರ್ಕಾರವಾಗಿ ಕಾರ್ಯನಿರ್ವಹಿಸಲು ಪೂರಕವಾಗಿ ಜಾರಿಗೆ ಬಂದಿರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತಿ ರಾಜ್ ಕಾಯಿದೆಯ ಸಮಗ್ರ ಪರಿಣಾಮಕಾರಿ ಅನುಷ್ಠಾನದಿಂದ ಮಾತ್ರ ಸಾಧ್ಯ. ಹೀಗಾಗಿ ಸ್ವಯಂ-ಸರ್ಕಾರಗಳಾಗಿ ಪಂಚಾಯತಿಗಳ ಬಲವರ್ಧನೆಗಾಗಿ, ಗ್ರಾಮ ಸಭೆಗಳ ಸಶಕ್ತತೆಗಾಗಿ ಅತ್ಯಂತ ಮಹತ್ವದ ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಯಿತು.

- **73ನೆ ಸಂವಿಧಾನ ತಿದ್ದುಪಡಿ, ಪುನರವಲೋಕನ ಮತ್ತು ಬದಲಾವಣೆ:** ಸಂವಿಧಾನದ 73ನೆ ತಿದ್ದುಪಡಿಯು ಗ್ರಾಮ ಸಭೆಗಳನ್ನು ಕಡ್ಡಾಯಗೊಳಿಸಿ ಜನರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ನೀಡಿದ್ದು, ಈ ಗ್ರಾಮ ಸಭೆಗಳ ಸಾಂಸ್ಥೀಕರಣವಾಗಬೇಕು. ರಾಜ್ಯದ ಕಾನೂನಿನ ಉಪಬಂಧಕ್ಕೊಳಪಡಿಸಿ, ಸ್ಥಳೀಯಾಡಳಿತ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ತ್ರಿಸ್ತರ ಅಥವಾ ದ್ವಿಸ್ತರ ವ್ಯವಸ್ಥೆ ರೂಪಿಸುವುದನ್ನು ರಾಜ್ಯದ ವಿವೇಚನೆಗೆ ನೀಡಬೇಕು. ರಾಜ್ಯ ಹಣಕಾಸು ಆಯೋಗಕ್ಕೆ ಸ್ಪಷ್ಟ ಜವಾಬ್ದಾರಿಯೊಂದಿಗೆ ಅಧಿಕಾರವನ್ನೂ ನೀಡಬೇಕು. ಆಯೋಗವು ವರದಿ ನೀಡಿದ ನಂತರ ಶೀಘ್ರವಾಗಿ ಇದರ ಬಗ್ಗೆ ತೀರ್ಮಾನಗಳಾಗಬೇಕು. ಸರ್ಕಾರವು ಒಪ್ಪಿಕೊಂಡ ವರದಿಯು ಸಮಗ್ರವಾಗಿ ತಕ್ಷಣದಲ್ಲಿ ಅನುಷ್ಠಾನಗೊಳ್ಳುವಂತೆ ಪ್ರಕ್ರಿಯೆ ಆರಂಭವಾಗಬೇಕು. ಕೇಂದ್ರ ಹಾಗೂ ರಾಜ್ಯಗಳು ಅವರು ಮಾಡಬಹುದಾದ ಕಾರ್ಯಗಳನ್ನು ಸೂಚಿಸುವ ಕೇಂದ್ರ ಹಾಗೂ ರಾಜ್ಯ ಪಟ್ಟಿಗಳಿರುವಂತೆ ಸಂವಿಧಾನದಲ್ಲಿ ಸ್ಥಳೀಯ ಸರ್ಕಾರಗಳ ಕಾರ್ಯಗಳ ಸ್ಪಷ್ಟೀಕರಣಕ್ಕೆ ಪ್ರತ್ಯೇಕ ಅನುಸೂಚಿಯನ್ನು ಸೇರಿಸಬೇಕು.

- **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ:** ಪಂಚಾಯತಿಗಳು ಸ್ಥಳೀಯ ಸರ್ಕಾರ ಮಾತ್ರವಲ್ಲ; ಅದು ಸ್ವಾಯತ್ತ ಸ್ಥಳೀಯ ಸರ್ಕಾರವಾಗಿದ್ದು, ಗ್ರಾಮ ಪಂಚಾಯತಿ ಎಲ್ಲಾ ಜನರಿಗೂ ನೇರವಾಗಿ ಭಾಗವಹಿಸಲು ಅವಕಾಶ ನೀಡುತ್ತದೆ. ಆದರೆ ಬೇರೆಡೆ ನಮ್ಮ ಭಾಗವಹಿಸುವಿಕೆ ನೇರವಾಗಿ ಇರುವುದಿಲ್ಲ. ಪ್ರತಿಯೊಂದು ಗ್ರಾಮ ಪಂಚಾಯತಿಗೆ ರಾಜಕೀಯ ಅಧಿಕಾರವಿರಬೇಕು. ಆಗ ಮಾತ್ರ ನಿಜವಾದ ಗ್ರಾಮ ಸ್ವರಾಜ್ ಸಾಧಿಸುವತ್ತ ಹೆಜ್ಜೆ ಇಡಬಹುದು. ಈ ಹಿನ್ನೆಲೆಯಲ್ಲಿ, ಸಂವಿಧಾನದ 73ನೆ ತಿದ್ದುಪಡಿಯ ತಳಹದಿಯಲ್ಲಿ ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ ರೂಪಿತವಾಗಿದೆ. ಈ ಕಾಯಿದೆಯು ಪ್ರಮುಖವಾಗಿ ಗ್ರಾಮ ಸಭೆಯ ಮಟ್ಟದಿಂದ ಸಂವಿಧಾನಾತ್ಮಕವಾಗಿ ಇರುವ ಅಧಿಕಾರದ ಸಹಜ ಗಳಿಕೆಗೆ ಪ್ರಾಶಸ್ತ್ಯ ನೀಡಿರುವುದಲ್ಲದೇ ಮತ್ತು ಜನ ಭಾಗವಹಿಸುವಿಕೆಯನ್ನು ಎತ್ತಿಹಿಡಿಯಲು ಜನವಸತಿ ಸಭೆಯನ್ನು ಕಡ್ಡಾಯಗೊಳಿಸಿರುವುದಲ್ಲದೇ, ಸ್ವಯಂ ಸರ್ಕಾರವಾಗಿ ಕಾರ್ಯ ನಿರ್ವಹಿಸುವಲ್ಲಿ ತ್ರಿಸ್ತರ ಪಂಚಾಯತಿ ವ್ಯವಸ್ಥೆಯ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪಂಚಾಯತಿಗಳಿಗೆ ಅವುಗಳ ಹೊಣೆ, ಜವಾಬ್ದಾರಿಗೆ ಅನುಗುಣವಾಗಿ ಅಧಿಕಾರಿಗಳು ಮತ್ತು ಸಂಪನ್ಮೂಲಗಳ ಸಹಜ ವರ್ಗಾವಣೆಯಾಗಬೇಕು ಎಂದಿದೆ.




"ಉಡುಪಿಯಲ್ಲಿ ನಡೆಯುತ್ತಿರುವ ಗ್ರಾಮ ಸ್ವರಾಜ್ ಚಿಂತನ-ಮಂಥನ ಕಾರ್ಯಕ್ರಮವು ತುಂಬಾ ಅರ್ಥಪೂರ್ಣವಾಗಿದ್ದು, ದೇಶ ಮಟ್ಟದಲ್ಲಿ ನಡೆಯುತ್ತಿರುವ ಮೊದಲ ಹಾಗೂ ವಿಭಿನ್ನ ಕಾರ್ಯಕ್ರಮವಾಗಿದೆ. ಇದು ಉಡುಪಿಯಲ್ಲಿ ಪ್ರಜಾಪ್ರಭುತ್ವದ ಕುರಿತಾಗಿರುವ ಕಾಳಜಿ ಹಾಗೂ ಬದ್ಧತೆಯನ್ನು ತೋರುತ್ತದೆ. ಪಂಚಾಯತ್ ರಾಜ್ ವ್ಯವಸ್ಥೆಯ ಬಲಪಡಿಸುವ ನಿಟ್ಟಿನಲ್ಲಿ ಉತ್ತಮವಾದ ಚಿಂತನೆ ನಡೆದು ಇದರ ಮುಂದಿನ ಕ್ರಮವಾಗಿ ಇದನ್ನು ರಾಜ್ಯ ಮಟ್ಟದಲ್ಲೂ ಮಂಡಿಸುವಂತಾಗಲಿ.

– ಶ್ರೀಮತಿ ಪ್ರಿಯಾಂಕ ಮೇರಿ ಫ್ರಾನ್ಸಿಸ್
ಜಿಲ್ಲಾಧಿಕಾರಿಗಳು ಉಡುಪಿ

- **ಕೇರಳದ ಅನುಭವಗಳು ಮತ್ತು ಕಲಿಕೆಗಳು:** ಕರ್ನಾಟಕ ಮತ್ತು ಕೇರಳದ ಪಂಚಾಯತಿ ರಾಜ್ ಕಾಯಿದೆಯನ್ನು ಹೋಲಿಸಿದರೆ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತಿ ರಾಜ್ ಕಾಯಿದೆ ಅತ್ಯುತ್ತಮವಾಗಿದೆ. ಆದರೆ ಅನುಷ್ಠಾನ ಪ್ರಕ್ರಿಯೆಯಲ್ಲಿ ಕರ್ನಾಟಕಕ್ಕಿಂತ ಕೇರಳ ರಾಜ್ಯದ ಪಂಚಾಯತಿ ರಾಜ್ ವ್ಯವಸ್ಥೆ ಸದೃಢವಾಗಿದೆ. ಸ್ಥಳೀಯಾಡಳಿತ ವ್ಯವಸ್ಥೆ ಗಟ್ಟಿಗೊಳಿಸುವಲ್ಲಿ ಆಡಳಿತ ವ್ಯವಸ್ಥೆಯೊಂದಿಗೆ ಸಮುದಾಯದ ಸಹಭಾಗಿತ್ವ ಪ್ರಮುಖ ಪಾತ್ರ ವಹಿಸುತ್ತದೆ. ಇವೆರಡೂ

ಜೊತೆಯಲ್ಲಿ ಕಾರ್ಯನಿರ್ವಹಿಸಿದಾಗ ವ್ಯವಸ್ಥೆಯು ಸದೃಢವಾಗುವುದರೊಂದಿಗೆ, ಸಮುದಾಯದ ಸಬಲೀಕರಣವೂ ಸಾಧ್ಯ. ಜನ ಭಾಗವಹಿಸುವಿಕೆಯಲ್ಲಿ ಯೋಜನೆ ತಯಾರಿಕೆಯು ಅಭಿವೃದ್ಧಿಯಲ್ಲಿ ಜನಪ್ರತಿನಿಧಿ-ಗಳನ್ನು ಜನರ ಸಮೀಪಕ್ಕೆ ಕೊಂಡೊಯ್ಯುವುದರೊಂದಿಗೆ ಆಡಳಿತದ ಮಟ್ಟವನ್ನು ಎತ್ತರಕ್ಕೇರಿಸುತ್ತದೆ.

- **ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತಿ ರಾಜ್ ವ್ಯವಸ್ಥೆಯ ಸವಾಲುಗಳು:** ಸಮುದಾಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ಹಂತಗಳಲ್ಲಿ ಬೇರೆ ಬೇರೆ ಕಾರ್ಯಕ್ರಗಳು ತಯಾರಾಗುತ್ತವೆ. ಈ ಕಾರ್ಯಕ್ರಮಗಳನ್ನು ಗಮನದಲ್ಲಿರಿಸಿ ಯೋಜನೆ ತಯಾರಿಸುವುದು, ತಯಾರಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ಥಳೀಯ ಸರ್ಕಾರಗಳ ಪಾತ್ರ ಅತ್ಯಂತ ಮಹತ್ವದ್ದು. ಚಿಂತನಶೀಲ, ಕೊಂಡುಕೊಳ್ಳುವಿಕೆಯ, ಜೀವನ್ಮುಖಿಯಾದಂತಹ ಗ್ರಾಮ ಗಣತಂತ್ರಗಳು ರೂಪಿತವಾಗಿ ತಮಗೆ ಬೇಕಾದ್ದನ್ನು ಸೃಷ್ಟಿಸಿಕೊಳ್ಳುವಂತಾಗಬೇಕು. ಪೌರ ಜಡತ್ವ ಇದ್ದರೆ ಪ್ರಜಾಪ್ರಭುತ್ವ ಸಾಧ್ಯವಿಲ್ಲ. ಚಿಕ್ಕ ಚಿಕ್ಕ ಪ್ರದೇಶಗಳು, ಸಣ್ಣ-ಪುಟ್ಟ ಜನರು ಒಟ್ಟಾಗಿ ಸೇರಿ ಕೈಜೋಡಿಸಿ ದೃಢ ನಿರ್ಧಾರದಿಂದ ಮುಂದಡಿಯಿಟ್ಟರೆ ದೊಡ್ಡ ಸಾಧನೆಗೆ ಮುನ್ನುಡಿ ತನ್ನಿಂದ ತಾನೇ ರೂಪುಗೊಳ್ಳುತ್ತದೆ. ಚಿಕ್ಕ ಮಗುವಿನಿಂದ ಪ್ರಾರಂಭವಾಗಿ ವಯೋವೃದ್ಧರವರೆಗೂ ಎಲ್ಲರೂ ತಮ್ಮ ಗ್ರಾಮಗಳನ್ನು ಗಣತಂತ್ರಗಳಾಗಿ ಮಾರ್ಪಡಿಸುವಲ್ಲಿ ಸಕ್ರೀಯರಾಗಬೇಕು.



## ಪ್ರಮುಖ ನಿರ್ಣಯಗಳು:

**1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತಿ ರಾಜ್ ಕಾಯ್ದೆಯ ಸಮಗ್ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಹಕ್ಕೊತ್ತಾಯ**

1.1. ತ್ರಿಸ್ತರ ಪಂಚಾಯತಿಗಳ ಜವಾಬ್ದಾರಿಯನ್ನು ಸ್ಪಷ್ಟಪಡಿಸಿ, ಶ್ರೀ ರಮೇಶಕುಮಾರ್ ನೇತೃತ್ವದ ಪಂಚಾಯತಿ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯು, ತನ್ನ ವರದಿ, ಕರಡು ಮಸೂದೆಯೊಂದಿಗೆ ರಾಜ್ಯ ಸರ್ಕಾರಕ್ಕೆ ಮಂಡಿಸಿದ ಮತ್ತು ಸರ್ಕಾರವು ಒಪ್ಪಿಕೊಂಡಿರುವ ಜವಾಬ್ದಾರಿ ನಕ್ಷೆಯನ್ನು ನಿಯಮವಾಗಿ ಕಾಯಿದೆಯ ಭಾಗವನ್ನಾಗಿಸುವುದು ಮತ್ತು ಅನುಷ್ಠಾನ [(28-ಸಿ), 58(5), (309ಬಿ) (3))]

1.2. ತ್ರಿಸ್ತರ ಪಂಚಾಯತಿಗಳಿಗೆ ಹೊಣೆಗಳೊಂದಿಗೆ (ಕಾರ್ಯಗಳೊಂದಿಗೆ) ಹಣಕಾಸು (ಅನುದಾನ) ಮತ್ತು ಹೊಣೆಗಾರರ (ಸಿಬ್ಬಂದಿಗಳ) ಹಸ್ತಾಂತರವನ್ನು ಕಡ್ಡಾಯವಾಗಿ ಮಾಡಬೇಕು. [ಅಧ್ಯಾಯ-4, ಪ್ರಕರಣ-58:(4); ಅಧ್ಯಾಯ 8, ಪ್ರಕರಣ 145:(3); ಅಧ್ಯಾಯ 11, ಪ್ರಕರಣ 184:(3)] ಅಂದರೆ ತ್ರಿಸ್ತರ ಪಂಚಾಯತಿ ವ್ಯವಸ್ಥೆಯ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪಂಚಾಯತಿಗಳಿಗೆ ಅವುಗಳ ಹೊಣೆ, ಜವಾಬ್ದಾರಿಗೆ ಅನುಗುಣವಾಗಿ ಅಧಿಕಾರಿಗಳು ಮತ್ತು ಸಂಪನ್ಮೂಲಗಳ ಸಹಜ ವರ್ಗಾವಣೆಯಾಗಬೇಕು.

1.3. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತಿ ರಾಜ್ ಕಾಯಿದೆಯ ಸಮಗ್ರ ಅನುಷ್ಠಾನಕ್ಕೆ ಪೂರಕವಾಗಿ ಆಗಬೇಕಾದ ನಿಯಮಗಳು, ಉಪ ನಿಯಮಗಳನ್ನು ರೂಪಿಸಲು, ಕಾಯಿದೆ ತಿದ್ದುಪಡಿ ಸಮಿತಿಯ ವರದಿ, ಕರಡು ಮಸೂದೆ ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದ ಕೋರ್ ಸಮಿತಿಯ ಸದಸ್ಯರು ಹಾಗೂ ಈ ಕ್ಷೇತ್ರದಲ್ಲಿ ಅನುಭವವಿರುವ ಪರಿಣಿತರನ್ನೊಳಗೊಂಡ ಸಮಿತಿಯನ್ನು ರಾಜ್ಯ ಸರ್ಕಾರವು ತಕ್ಷಣವೇ ರಚಿಸಿ, ಸಮಗ್ರ ಅನುಷ್ಠಾನ ಪ್ರಕ್ರಿಯೆಗೆ ಚಾಲನೆ ನೀಡಬೇಕು.

**ಪ್ರತಿ ಪಂಚಾಯತಿಯ ಎಸ್ಕ್ರೋ ಖಾತೆಯ ಮೂಲಕ ತಡೆಹಿಡಿದಿರುವ ಗ್ರಾಮ ಪಂಚಾಯತಿಗಳ ಅನುದಾನವನ್ನು ಆಯಾ ಪಂಚಾಯತಿಗಳಿಗೆ ವರ್ಗಾಯಿಸಿ, ಮುಂದಿನ 10 ದಿನದೊಳಗಾಗಿ ಈ ಎಸ್ಕ್ರೋ ಖಾತೆಯನ್ನು ರದ್ದುಗೊಳಿಸಬೇಕು. ಹಾಗೂ ಮುಂದಿನ ದಿನಗಳಲ್ಲಿ ಕಾನೂನಾತ್ಮಕವಾಗಿ ಸ್ಥಳೀಯಾಡಳಿತ ಸಂಸ್ಥೆಗಳ ಎಲ್ಲಾ, ಹಕ್ಕು, ಅಧಿಕಾರ ಮತ್ತು ಜವಾಬ್ದಾರಿಗಳನ್ನು ಆಯಾ ಹಂತದ ಸ್ಥಳೀಯ ಸರ್ಕಾರಗಳೇ ನಿರ್ವಹಿಸುವಂತೆ ಆಗುವಲ್ಲಿ ಸರ್ಕಾರ ತಕ್ಷಣದಿಂದ ಕ್ರಮ ಕೈಗೊಳ್ಳಲು ಪ್ರಕ್ರಿಯೆ ಆರಂಭಿಸಬೇಕು. ಇಲ್ಲದಿದ್ದರೆ, ರಾಜ್ಯದಾದ್ಯಂತ ಎಲ್ಲಾ ಗ್ರಾಮ ಪಂಚಾಯತಿಗಳೂ ಸೇರಿ ತಮ್ಮ ಹಕ್ಕು ಮತ್ತು ಅಧಿಕಾರವನ್ನು ಹೋರಾಟದ ಮೂಲಕವಾದರೂ ಪಡೆದುಕೊಳ್ಳಬೇಕಾಗುತ್ತದೆ ಎಂದು ಈ ಕಾರ್ಯಕ್ರಮದ ಮೂಲಕ ರಾಜ್ಯದ ಎಲ್ಲಾ ಸ್ಥಳೀಯ ಆಡಳಿತ ಸಂಸ್ಥೆಗಳ ಪರವಾಗಿ ನಿರ್ಣಯ ಕೈಗೊಂಡು ಹಕ್ಕೊತ್ತಾಯ ಮಂಡಿಸಲಾಗಿದೆ.**

**2. ಶ್ರೀ ರಮೇಶಕುಮಾರ್ ಅಧ್ಯಕ್ಷತೆಯ ಕಾಯಿದೆ ತಿದ್ದುಪಡಿ ಸಮಿತಿಯು ಶಿಫಾರಸ್ಸು ಮಾಡಿದ, ಆದರೆ ಕಾಯಿದೆಯಲ್ಲಿ ಅಳವಡಿಸಿಕೊಳ್ಳದೆ ಬಿಟ್ಟು ಹೋಗಿರುವ ಪ್ರಮುಖ ಅಂಶಗಳ ಸೇರ್ಪಡೆ**

2.1 ಅಭಿವೃದ್ಧಿಗೆ ಪೂರಕವಾಗುವಂತೆ ದೊಡ್ಡ ಪಂಚಾಯತಿಗಳ ರಚನೆಗೆ ಒತ್ತು. ಹಾಗೂ ಪಂಚಾಯತಿಗಳ ಆಡಳಿತ ನಡೆಸಲು ಹಾಗೂ ಅವುಗಳ ಹೊಣೆಗಾರಿಕೆಗೆ ಅನುಗುಣವಾಗಿ ಅಗತ್ಯವಾದ ಮೂಲಭೂತ ಸೌಕರ್ಯಗಳು, ಸಿಬ್ಬಂದಿಗಳು, ಹಣಕಾಸು ಎಲ್ಲವನ್ನೂ ಪೂರೈಸುವಂತಾಗಬೇಕು.

2.2 ಗ್ರಾಮ ಪಂಚಾಯತಿ ಎಲ್ಲಾ ಸಿಬ್ಬಂದಿಗಳಿಗೆ ವೇತನ, ನಿರ್ದೇಶನಗಳನ್ನು ನೀಡುವ ಅಧಿಕಾರ ಸ್ಥಳೀಯ ಸರ್ಕಾರಗಳಿಗೆ ಹಾಗೂ ಅದಕ್ಕಾಗಿ ಪ್ರತ್ಯೇಕ ಅನುದಾನ

2.3 ಏಕಸದಸ್ಯ ಮತಕ್ಷೇತ್ರ ರಚನೆ

2.4 ಮದ್ಯ ಮಾರಾಟ ಅಥವಾ ಜೂಜಾಟಕ್ಕೆ ಸಂಬಂಧಿಸಿದಂತೆ ಸ್ಥಳ ನಿರ್ಧಾರ ಮತ್ತು ಪರವಾನಿಗೆ ಕೊಡುವ ಅಧಿಕಾರ ಗ್ರಾಮ ಸರ್ಕಾರಕ್ಕೇ

2.5 ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಖಾಸಗಿ ಕಾರ್ಯದರ್ಶಿ (ಆಪ್ತಸಹಾಯಕರು) ನೇಮಕ ಮಾಡಿಕೊಳ್ಳುವ ಅವಕಾಶ

2.6 ಪಂಚಾಯತಿಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಶೌಚಾಲಯಗಳು ಮತ್ತು ನಿರೀಕ್ಷಣಾ ಕೊಠಡಿಗಳ ರಚನೆ

2.7 ಗ್ರಾಮ ಮಟ್ಟದಲ್ಲಿ ದೂರು (ಸಂಕಷ್ಟ) ನಿವಾರಣೆಗೆ ಅವಕಾಶ

2.8 ಚುನಾವಣಾ ಖರ್ಚುಗಳಿಗೆ ರಾಜ್ಯ ಸರ್ಕಾರದಿಂದ ಹಣಕಾಸು

**3. ದೇಶದಾದ್ಯಂತ ಸ್ಥಳೀಯಾಡಳಿತ ಸಂಸ್ಥೆಗಳು ಸ್ವಯಂ-ಸರ್ಕಾರವಾಗಿ ಕಾರ್ಯನಿರ್ವಹಿಸುವಲ್ಲಿ ಸಂವಿಧಾನದ 73ನೇ ತಿದ್ದುಪಡಿ ಕಾಯಿದೆಯನ್ನು ಇನ್ನೂ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕೆಲವು ಪ್ರಮುಖ ಬದಲಾವಣೆಗಳು:**

3.1 ಪಂಚಾಯತಿಗಳಿಗೆ ಸಂಬಂಧಿಸಿದಂತೆ ಸಂವಿಧಾನದ ಪರಿಚ್ಛೇದ IX ರ ಅಡಿಯಲ್ಲಿ ರಾಜ್ಯಗಳ ವಿವೇಚನೆಗೆ ಬಿಟ್ಟಿರುವ ಅಂಶಗಳನ್ನು ಪುನರ್‌ವಿಮರ್ಶಿಸುವುದು ಮತ್ತು ಅದನ್ನು ಕಡ್ಡಾಯಗೊಳಿಸುವುದು. (ವಿಧಿ 243 ಎ, 243 ಜಿ, 243 ಹೆಚ್)

3.2 ಪಂಚಾಯತಿಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಪೂರಕವಾಗಿ ಸಂವಿಧಾನದ 246ನೇ ವಿಧಿಯಲ್ಲಿ ಈಗಾಗಲೇ ಹೇಳಿರುವ 7ನೇ ಅನುಸೂಚಿಯಲ್ಲಿ ನಮೂದಿಸಿರುವ ಒಕ್ಕೂಟ ಪಟ್ಟಿ, ರಾಜ್ಯ ಪಟ್ಟಿ ಮತ್ತು ಸಮವರ್ತಿ ಪಟ್ಟಿಗಳೊಂದಿಗೆ IVನೇ ಪಟ್ಟಿಯಾಗಿ ಪಂಚಾಯತಿ ರಾಜ್ ಪಟ್ಟಿಯನ್ನು ಸೇರಿಸಬೇಕು.

3.3 ಪರಿಚ್ಛೇದ IXರ ವಿಧಿ – '243ಬಿ'ಯ ಉಪಬಂಧದಲ್ಲಿ ಕಡ್ಡಾಯಗೊಳಿಸಿರುವ ತ್ರಿಸ್ತರ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾಗಿ ತ್ರಿಸ್ತರ ಅಥವಾ ದ್ವಿಸ್ತರ ವ್ಯವಸ್ಥೆಯನ್ನು ಹೊಂದುವ ಅಧಿಕಾರವನ್ನು ರಾಜ್ಯಗಳ ವಿವೇಚನೆಗೆ ಬಿಡಬೇಕು.




## ಮಕ್ಕಳು ಅವರ ಹಕ್ಕು, ರಕ್ಷಣೆ:

- ಮಕ್ಕಳ ಗ್ರಾಮ ಸಭೆಗಳು ಎಲ್ಲಾ ಪಂಚಾಯತಿಗಳಲ್ಲಿ ತಪ್ಪದೇ, ಕ್ರಮಬದ್ಧವಾಗಿ ನಡೆಯಬೇಕು.
- ಮಕ್ಕಳ ಗ್ರಾಮ ಸಭೆಯಲ್ಲಿ ಮಕ್ಕಳು ಎತ್ತಿದಂತಹ ವಿಷಯಗಳಿಗೆ ಪ್ರಥಮ ಆದ್ಯತೆ ನೀಡಿ ಪರಿಹಾರ ಕಂಡುಕೊಳ್ಳುವ ಪ್ರಕ್ರಿಯೆ ನಡೆಯಬೇಕು.
- ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, ಅವರ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಲು, ರಾಜ್ಯದಾದ್ಯಂತ ಮಕ್ಕಳೇ ರೂಪಿಸಿಕೊಂಡ ಮಾನದಂಡದ ಪ್ರಕಾರ, ಮಕ್ಕಳೇ ಆಯ್ಕೆ ಮಾಡಿದ ಮಕ್ಕಳ ಮಿತ್ರರ ವ್ಯವಸ್ಥೆ ಪಂಚಾಯತಿ ಮಟ್ಟದಲ್ಲಿ ರೂಪಿತವಾಗಬೇಕು.
- ಮಕ್ಕಳ ವಿಷಯ, ಸಮಸ್ಯೆಗಳನ್ನು ಹಂಚಿಕೊಳ್ಳಲು, ಪಂಚಾಯತಿ ವ್ಯಾಪ್ತಿಯಲ್ಲಿ ಮಕ್ಕಳ ಅಂಚೆಪೆಟ್ಟಿಗೆ ವ್ಯವಸ್ಥೆ ಬೇಕು.
- ದಾಳಿ ಮತ್ತು ರಕ್ಷಣೆ ಎಂಬ ರಾಜ್ಯದ ಕಾರ್ಯಾಚರಣೆಯ ಪ್ರಕ್ರಿಯೆಯು, ಮಕ್ಕಳ ರಕ್ಷಣೆಯ ಬದಲಾಗಿ ಶೋಷಣೆಯಾಗುತ್ತಿದೆ, ಇಂತಹ ಮಕ್ಕಳ ಹಕ್ಕುಗಳನ್ನೇ ಉಲ್ಲಂಘಿಸುವ ಕ್ರಮಗಳನ್ನು ರಾಜ್ಯದಾದ್ಯಂತ ನಿಲ್ಲಿಸಬೇಕು.

- ಮದ್ಯದಂಗಡಿಗಳನ್ನು ತೆರೆಯಲು ಗ್ರಾಮ ಪಂಚಾಯತಿ ಪರವಾನಿಗೆಯನ್ನು ಕಡ್ಡಾಯ ಮಾಡಬೇಕು.

## ಕಾಯಿದೆಯ ಸಮಗ್ರ ಅನುಷ್ಠಾನದ ನಿಧಾನಗತಿಯ ಪ್ರಕ್ರಿಯೆಯಿಂದಾಗಿ ಸ್ಥಳೀಯಾಡಳಿತ ಸಂಸ್ಥೆಗಳ ಆಡಳಿತದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳು ಮತ್ತು ಅಗತ್ಯವಿರುವ ಬದಲಾವಣೆ

- ಗ್ರಾಮ ಪಂಚಾಯತಿಗಳ ಎಸ್ಕ್ರೋ ಖಾತೆಯಲ್ಲಿ ಗ್ರಾಮಗಳ ಅಭಿವೃದ್ಧಿ ಯೋಜನೆಯ ಕೋಟ್ಯಂತರ ರೂಪಾಯಿಗಳು ವರ್ಷಾನುಗಟ್ಟಲೆ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗದೇ ಹಾಗೆಯೇ ಉಳಿದಿರುತ್ತವೆ. ಇಂತಹ ಎಸ್ಕ್ರೋ ಖಾತೆಗಳನ್ನು ವಜಾಗೊಳಿಸಿ, ಪಂಚಾಯತಿಗಳ ಅಭಿವೃದ್ಧಿಗಾಗಿ ವಿನಿಯೋಗಿಸಬೇಕಾದ ಅಭಿವೃದ್ಧಿ ಅನುದಾನವನ್ನು ನೇರವಾಗಿ ಪಂಚಾಯತಿ ಖಾತೆಗೆ ವರ್ಗಾಯಿಸುವಂತಾಗಬೇಕು.

- ಪ್ರಸ್ತುತ ಕಾಯಿದೆಯಲ್ಲಿರುವ ಪ್ರಕರಣ 64(5), 70(3), 237 ಹಾಗೂ 269 ದುರ್ಬಳಕೆಯಾಗುತ್ತಿದ್ದು, ಸ್ಥಳೀಯಾಡಳಿತ ಸಂಸ್ಥೆಗಳು ಸ್ವಯಂ-ಸರ್ಕಾರವಾಗಿ ಕಾರ್ಯನಿರ್ವಹಿಸುವಲ್ಲಿ ತೊಡಕಾಗಿರುವುದರಿಂದ, ಅದನ್ನು ಕಾಯಿದೆಯಿಂದ ಕೈಬಿಟ್ಟು, ಇದಕ್ಕಾಗಿ ಸ್ವತಂತ್ರ ಪ್ರಾಧಿಕಾರ ರಚನೆಯಾಗಬೇಕು.

- ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಉಲ್ಲೇಖಿಸಿರುವಂತೆ ಯಾವುದೇ ಯೋಜನೆಯ ವೈಯಕ್ತಿಕ ಫಲಾನುಭವಿಗಳ ಆಯ್ಕೆಯ ಅಧಿಕಾರ ಗ್ರಾಮ ಸಭೆಯದ್ದು. ಹೀಗಾಗಿ ಇಂತಹ ಯಾವುದೇ ಯೋಜನೆಗಳಿಗೆ ಗ್ರಾಮ ಸಭೆಯಲ್ಲಿಯೇ ಫಲಾನುಭವಿಗಳ ಆಯ್ಕೆ ಅಂತಿಮವಾಗಬೇಕು. ಅಲ್ಲದೇ, ಗ್ರಾಮ ಸಭೆ ತಯಾರಿಸಿ, ಕೈಗೊಂಡ ನಿರ್ಣಯಗಳ ಮೇಲೆ ತಯಾರಿಸಿದ ಗ್ರಾಮ ಪಂಚಾಯತಿಗಳ ಕ್ರಿಯಾ ಯೋಜನೆಗಳ ಕಾಮಗಾರಿ ಅನುಷ್ಠಾನದ ತೀರ್ಮಾನ ಗ್ರಾಮ ಪಂಚಾಯತಿ ಹಂತದಲ್ಲಿಯೇ ನಡೆಯಬೇಕು. ಗ್ರಾಮ ಸಭೆಯ ಯೋಜನೆಗಳಿಗೆ, ನಿರ್ಣಯಕ್ಕೆ ಎಲ್ಲ ಹಂತದ ಸರ್ಕಾರಗಳ ಬದ್ಧತೆ ಕಡ್ಡಾಯವಾಗಿರಬೇಕು. ಎಲ್ಲ ಗ್ರಾಮ ಸಭೆಗಳಲ್ಲೂ ಸಂಬಂಧಪಟ್ಟ ವಿವಿಧ ಇಲಾಖೆಯ ಅಧಿಕಾರಿಗಳು ತಪ್ಪದೇ ಹಾಜರಿದ್ದು, ಗ್ರಾಮ ಸಭೆಯಲ್ಲಿ ಬಂದಂತಹ ವಿಷಯಗಳಿಗೆ ಪ್ರತಿಕ್ರಿಯಿಸುವಂತಾಗಬೇಕು.

- ಇಲಾಖಾವಾರು ಕಾರ್ಯಕ್ರಮಗಳು, ಶಾಸಕರ ಮತ್ತು ಸಂಸದರ ಅನುದಾನದ ಕಾರ್ಯಕ್ರಮಗಳು ಹಲವು ಬಾರಿ ಗ್ರಾಮ ಸಭೆಯ ನಿರ್ಣಯದಿಂದ ಹೊರತುಪಡಿಸಿ, ಕೆಲವೊಮ್ಮೆ ಗ್ರಾಮ ಪಂಚಾಯತಿ ಗಮನಕ್ಕೂ ಬರದೇ ನಡೆಯುತ್ತವೆ. ಇದರಿಂದಾಗಿ ಗ್ರಾಮದ ಸಮಗ್ರ ಅಭಿವೃದ್ಧಿಗೆ ತೊಡಕಾಗುತ್ತದೆ. ಗ್ರಾಮ ಪಂಚಾಯತಿಗೆ ಕೇಂದ್ರ ಮತ್ತು ರಾಜ್ಯ ಅನುದಾನಗಳಲ್ಲದೇ ಶಾಸಕರ ಮತ್ತು ಸಂಸದರ ಅನುದಾನಗಳ ಕಾರ್ಯಕ್ರಮಗಳು ಹಾಗೂ ಇತರ ಇಲಾಖಾ ಕಾರ್ಯಕ್ರಮಗಳು, ಗ್ರಾಮ ಸಭೆಯ ನಿರ್ಣಯದ ಆಧಾರದ ಮೇಲೆ ಗ್ರಾಮ ಪಂಚಾಯತಿ ತಯಾರಿಸಿದ ಯೋಜನೆಗಳಿಗೆ ಅನುಗುಣವಾಗಿ ಅನುಷ್ಠಾನಗೊಳ್ಳಬೇಕು. ಹಾಗೂ ಇಂತಹ ಕಾಮಗಾರಿಗಳನ್ನು ಪರಿಶೀಲಿಸುವ ಮತ್ತು ಮೌಲ್ಯಮಾಪನ ಮಾಡುವ ಅಧಿಕಾರ ಗ್ರಾಮ ಸಭೆಯದ್ದಾಗಿದೆ. (ಉದಾ: ರಸ್ತೆ, ಮದಗ, ಕೃಷಿಹೊಂಡ ರಚನೆ, ಕೆರೆ-ಬಾವಿಗಳ ರಚನೆ, ಕಲ್ಲುಗಣಿ, ಮರಳಿನ ಗಣಿ, ಕೈಗಾರಿಕಾ ಘಟಕಗಳು ಇತ್ಯಾದಿ)

- ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಮತ್ತು ಅನುಷ್ಠಾನ ಸಂಪೂರ್ಣವಾಗಿ ಗ್ರಾಮ ಸಭೆಯಲ್ಲಿ ಅನುಮೋದಿಸಿದ ಯೋಜನೆಯಂತೆ ಆಗಬೇಕು.

- ರಾಜ್ಯದಾದ್ಯಂತ ಮಕ್ಕಳ, ಮಹಿಳೆಯರ ಗ್ರಾಮ ಸಭೆಗಳು ತಪ್ಪದೇ, ಪ್ರತ್ಯೇಕವಾಗಿ, ಕ್ರಮಬದ್ಧವಾಗಿ ನಡೆಯಬೇಕು.

- ಮಕ್ಕಳ ಮತ್ತು ಮಹಿಳಾ ಗ್ರಾಮ ಸಭೆಗಳಲ್ಲಿ ಮಂಡನೆಯಾದ ಸಮಸ್ಯೆಗಳಿಗೆ ಪ್ರಥಮ ಆದ್ಯತೆಯ ಆಧಾರದ ಮೇಲೆ ಯೋಜನೆಯ ಅನುಷ್ಠಾನವಾಗಬೇಕು.

- ಗ್ರಾಮ ಸ್ವರಾಜ್ ಕಾಯಿದೆಯ ಪ್ರಕರಣ 206ರಲ್ಲಿ ಹೇಳಿರುವ ಪಂಚಾಯತಿಗಳಿಗೆ ಬರುವಂತಹ ಶಾಸನಬದ್ಧ ಅನುದಾನ ಕನಿಷ್ಠ ರೂ.1.00 ಕೋಟಿಗಳಿಗೆ ಹೆಚ್ಚಳವಾಗಬೇಕು. ಹಾಗೂ ಅದರ 25% ಮುಕ್ತ ಅನುದಾನವಾಗಿರಬೇಕು.

- ಗ್ರಾಮ ಪಂಚಾಯತಿ ಮಟ್ಟದಲ್ಲಿ ಕಟ್ಟಡ ಕಾಮಗಾರಿಗಳಿಗೆ ಪರವಾನಿಗೆ ನೀಡುವ ಸಂದರ್ಭದಲ್ಲಿ ಸಂಗ್ರಹವಾಗುವ 1% ಕಾರ್ಮಿಕರ ಕಲ್ಯಾಣ ನಿಧಿಯನ್ನು ಆಯಾ ಪಂಚಾಯತಿ ವ್ಯಾಪ್ತಿಯಲ್ಲಿರುವ ಕಾರ್ಮಿಕರ ಕಲ್ಯಾಣಕ್ಕೇ ವಿನಿಯೋಗಿಸುವ ಅಧಿಕಾರ ಪಂಚಾಯತಿಗಳಿಗಿರಬೇಕು.

- ಗ್ರಾಮ ಪಂಚಾಯತಿ ಅಧ್ಯಕ್ಷರ ವಿವೇಚನಾ ಅನುದಾನ ರೂ.25000/- ಹೆಚ್ಚಳವಾಗಬೇಕು.

- ಗ್ರಾಮ ಮಟ್ಟದಲ್ಲಿ ನಡೆಯುವ ಯಾವುದೇ ರೀತಿಯ ಗಣಿಗಾರಿಕೆಯಿಂದ ಸಂಗ್ರಹವಾಗುವ ರಾಜಧನ/ರಾಜಸ್ವದ 50% ಗ್ರಾಮ ಪಂಚಾಯತಿಗೆ ಸಿಗುವಂತಾಗಬೇಕು.

- ಬಾಪೂಜಿ ಸೇವಾ ಕೇಂದ್ರಕ್ಕೆ ಅಗತ್ಯವಾದ ಮೇಲ್ದರ್ಜೆಗೇರಿಸಲ್ಪಟ್ಟ ತಾಂತ್ರಿಕ ಸೌಕರ್ಯ, ಹಣಕಾಸು, ಸಿಬ್ಬಂದಿಗಳನ್ನು ಪಂಚಾಯತಿಗಳಿಗೆ ಒದಗಿಸಬೇಕು. ಅಲ್ಲದೇ ಅದರಿಂದ ಸಂಗ್ರಹವಾಗುವ ಆದಾಯವನ್ನು ಪಂಚಾಯತಿ ನಿಧಿ ಎಂದು ಪರಿಗಣಿಸಬೇಕು.

- ಹತ್ತಾರು ಪಂಚಾಯತಿಗಳಿಗೆ ಒಬ್ಬ ಇಂಜಿನಿಯರ್ ಕಾರ್ಯನಿರ್ವಹಿಸುತ್ತಿರುವುದರಿಂದ ಅವರ ಸೇವೆ ಯಾವ ಪಂಚಾಯತಿಗಳಿಗೂ ಸೂಕ್ತವಾಗಿ, ಸಮರ್ಪಕವಾಗಿ ಲಭ್ಯವಾಗುವುದಿಲ್ಲ. ಹೀಗಾಗಿ 2 ಪಂಚಾಯತಿಗಳಿಗೆ ಒಬ್ಬರಂತೆ ಇಂಜಿನಿಯರ್ ನೇಮಕವಾಗಬೇಕು.

- ಪ್ರತಿ ಪಂಚಾಯತಿಗೂ ಒಬ್ಬರು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕರು ಕಡ್ಡಾಯವಾಗಿ ಇರಲೇಬೇಕು.

- ಗ್ರಾಮ ಸ್ವರಾಜ್ ಕಾಯಿದೆಯಲ್ಲಿ ಹೇಳಿರುವಂತೆ ತ್ರಿಸ್ತರ ಪಂಚಾಯತಿ ಅಧ್ಯಕ್ಷರು ಆಯಾ ಹಂತದ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕರರಾಗಿರುತ್ತಾರೆ. ಅದಕ್ಕನು ಗುಣವಾಗಿ ಗ್ರಾಮ ಪಂಚಾಯತಿ ಅಧ್ಯಕ್ಷರ, ಉಪಾಧ್ಯಕ್ಷರ ಹಾಗೂ ಸದಸ್ಯರ ಗೌರವಧನ ಹೆಚ್ಚಳವಾಗಬೇಕು. ಸ್ಥಾಯಿ ಸಮಿತಿ, ವಿಶೇಷ ಸಮಿತಿಗಳ ಸಭಾಭತ್ಯೆಯನ್ನೂ ಒಳ ಗೊಂಡಂತೆ, ಎಲ್ಲಾ ಸಭೆಗಳ ಸಭಾಭತ್ಯೆ ಹೆಚ್ಚಳವಾಗಬೇಕು.

- ಕುಡಿಯುವ ನೀರು ಮತ್ತು ದಾರಿದೀಪಕ್ಕೆ ಬಳಕೆಯಾಗುವ ವಿದ್ಯುತ್‌ಗೆ ಮನೆಬಳಕೆ ವಿದ್ಯುತ್ ದರ ನಿಗದಿಯಾಗಬೇಕು.

- ಘನ ಮತ್ತು ದ್ರವ ಸಂಪನ್ಮೂಲ ನಿರ್ವಹಣಾ ಯೋಜನೆಗಳಿಗೆ ಪ್ರತ್ಯೇಕ ಅನುದಾನವಿರಬೇಕು.

- ತ್ಯಾಜ್ಯ ಮುಕ್ತ ಗ್ರಾಮವನ್ನಾಗಿಸಲು, ತ್ಯಾಜ್ಯ ಸಂಪನ್ಮೂಲ ನಿರ್ವಹಣೆಗಾಗಿ ಪಂಚಾಯತಿ ಮಟ್ಟದಲ್ಲಿ ಕೆಲಸ ಮಾಡುತ್ತಿರುವವರಿಗೆ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಅಡಿಯಲ್ಲಿ ವೇತನ ನೀಡುವಂತಾಗಬೇಕು.

- ಅಭಿವೃದ್ಧಿ ಕಾಮಗಾರಿಗಳ ಹಂತಗಳನ್ನು ಪರಿಶೀಲಿಸಲು ಇರುವ ಗಾಂಧಿ ಸಾಕ್ಷಿ ಕಾಯಕದಂತಹ ತಂತ್ರಾಂಶಗಳಲ್ಲಿ ಇರುವ ತಾಂತ್ರಿಕ ಕೊರತೆಗಳನ್ನು ನೀಗಿಸಬೇಕು, ಅವುಗಳನ್ನು ಕಾಯಿದೆಗೆ ಅನುಗುಣವಾಗಿ, ಕಾಲಕಾಲಕ್ಕೆ ಸರಿಯಾಗಿ ಮೇಲ್ದರ್ಜೆಗೇರಿಸಬೇಕು. ಅಲ್ಲದೇ ಪರಿಶೀಲನಾ ಹಂತಗಳು ಗ್ರಾಮ ಸಭೆ ಮತ್ತು ಗ್ರಾಮ ಪಂಚಾಯತಿ ಹಂತದಲ್ಲಿಯೇ ಅಂತಿಮವಾಗಬೇಕು.

- ಪಂಚಾಯತಿ ಮಟ್ಟದಲ್ಲಿ ಏಕ ಸದಸ್ಯ ಮತ ಕ್ಷೇತ್ರ ರಚನೆಯಾಗಬೇಕು.

- ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ 10 ಎಕರೆ ಸರ್ಕಾರಿ ಭೂಮಿಯನ್ನು ಸಾಮಾಜಿಕ ಉಪಯೋಗಕ್ಕಾಗಿ ಮೀಸಲಿಡಬೇಕು.

- ಪಡಿತರ ಚೀಟಿಯ ಎಲ್ಲಾ ಪ್ರಕ್ರಿಯೆಗಳನ್ನೂ ಪೂರ್ಣ ಪ್ರಮಾಣದಲ್ಲಿ ಗ್ರಾಮ ಪಂಚಾಯತಿಗಳಿಗೇ ಕೊಡಬೇಕು. ಇಲ್ಲವಾದಲ್ಲಿ ಸಂಪೂರ್ಣವಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ನೀಡಬೇಕು.

- ಪಂಚಾಯತಿ ಅಧೀನದ ವಾಣಿಜ್ಯ ಕಟ್ಟಡಗಳಲ್ಲಿ ಪರವಾನಿಗೆ ಶುಲ್ಕ ಅಥವಾ ಬಾಡಿಗೆ ಆಧಾರದ ಮೇಲೆ ನಿರ್ದಿಷ್ಟ ಅವಧಿಗೆ ಪಡೆದು, ಅವಧಿ ಮೀರಿ, ಅನಧಿಕೃತವಾಗಿ ಮುಂದುವರಿಸುತ್ತಿರುವ ಅಂಗಡಿಗಳು, ಕೈಗಾರಿಕಾ ಘಟಕಗಳು ಮುಂತಾದ ಕಟ್ಟಡಗಳನ್ನು ತೆರವುಗೊಳಿಸುವ ಸಕ್ಷಮ ಅಧಿಕಾರವನ್ನು ಗ್ರಾಮ ಪಂಚಾಯತಿನ ಅಧಿಕಾರಿಯಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ನೀಡಬೇಕು.

- ತಾಲ್ಲೂಕು ಪಂಚಾಯತಿಗಳಲ್ಲಿ ಪರ್ಯಾಯವಾಗಿ ಒಂದೊಂದು ವರ್ಷ ಪದನಿಮಿತ್ತ ಸದಸ್ಯರಾಗಿ ಕರ್ತವ್ಯ ನಿರ್ವಹಿಸುವ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಪದನಿಮಿತ್ತ ಸದಸ್ಯರಾಗಿ ಕರ್ತವ್ಯ ನಿರ್ವಹಿಸುವ ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಆಯಾ ಸ್ತರದ ಸದಸ್ಯರಿಗಿರುವ ಹಕ್ಕು, ಅಧಿಕಾರ, ಸ್ಥಾನ–ಮಾನ, ಸಭಾಭತ್ಯೆ ಸಿಗುವಂತಾಗಬೇಕು.